ಆ) ಎಷ್ಟು ಕುಟುಂಬಗಳಿಗೆ ಮರುವಸತಿ ಕಲ್ಪಿಸಬೇಕಾಗುತ್ತದೆ, ಹಾಗೂ ಈಗಾಗಲೇ ಎಷ್ಟು ಕುಟುಂಬಗಳಿಗೆ ಮರುವಸತಿ ಕಲ್ಪಿಸಲಾಗಿದೆ ?

ಇ) ಮರುವಸತಿ ಬಗ್ಗೆ ಖರ್ಚಾಗತಕ್ಕ ಹಣ ಎಷ್ಟೆಂದು ಅಂದಾಜಿಸಲಾಗಿದೆ, ಈ ಬಗ್ಗೆ ಕೇಂದ್ರ ಸರ್ಕಾರದವರು ಈತನಕ ಬಿಡುಗಡೆ ಮಾಡಿದ ಹಣ ಎಷ್ಟು ?

ಈ) ಕೇಂದ್ರದಿಂದ ಬಿಡುಗಡೆ ಆದ ಹಣವನ್ನು ಬೇರೆ ಕೆಲಸಕ್ಕೆ ಈಗಾಗಲೇ ಖರ್ಚು ಮಾಡಲಾಗಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಸಚಿವರು). —

ಅ) ೨,೪೬೩ ಎಕರೆ ೩೪ ಗುಂಟೆ ಡಿ/ಳ ಅನಾಸ್,

ಆ) ಪುನರ್‌ವಸತಿ ಸಭೆಯು ಸುಮಾರು ೩೬೭೨ ಕುಟುಂಬಗಳನ್ನು ಗುರುತಿಸಿದೆ. ಮತ್ತು ಪುನರ್‌ವಸತಿಗೊಳಿಸಲು ಶಿಫಾರಸ್ಸು ಮಾಡಿದೆ. ಇಲ್ಲಿಯವರೆವಿಗೂ ಯಾವ ಕುಟುಂಬವನ್ನು ಪುನರ್‌ವಸತಿ ಗೊಳಿಸಿಲ್ಲ.

ಇ) ಪುನರ್‌ವಸತಿ ಬಗ್ಗೆ ಖರ್ಚಾಗತಕ್ಕ ಅಂದಾಜು ಹಣವನ್ನು ಇನ್ನೂ ತೀರ್ಮಾನಿಸಿಲ್ಲ. ಕೇಂದ್ರ ಸರ್ಕಾರದವರು ರೂ ೭.೦೪ ಕೋಟಿಯನ್ನು ಇಲ್ಲಿಯವರೆವಿಗೂ ಬಿಡುಗಡೆ ಮಾಡಿದ್ದಾರೆ.

ಈ) ಇಲ್ಲ.

ಎಂಡೋಮೆಂಟ್ ಸಮಿತಿ ರಚನೆ

೬೫೦. ಶ್ರೀ ಕೆ. ಕಂಶಾಲ (ಸುಳ್ಯ).— ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸುಳ್ಯ ತಾಲ್ಲೂಕಿನ ಶ್ರೀ ಚನ್ನಕೇಶವ ದೇವಾಲಯವು ಸರ್ಕಾರದ ಧಾರ್ಮಿಕ ದತ್ತಿ ಇಲಾಖೆಗೆ ಸೇರಿರುವುದೇ ಹಾಗಿದ್ದಲ್ಲಿ ಸರ್ಕಾರವು ಧಾರ್ಮಿಕ ದತ್ತಿ ಸಮಿತಿ ರಚಿಸಿ, ಎಷ್ಟು ವರ್ಷಗಳಾದವು ?

ಆ) ಧಾರ್ಮಿಕ ದತ್ತಿ ನಿಯಮದಂತೆ ಸದರಿ ದೇವಾಲಯದ ಕಾರ್ಯಕ್ರಮಗಳು ಜರುಗುತ್ತಿವೆಯೇ, ಇಲ್ಲವಾದಲ್ಲಿ ಕಾರಣವೇನು ?

ಇ) ಸದರಿ ಸಮಿತಿಯ ಅವಧಿಯು ಮುಗಿದಿರುವುದೇ, ಹಾಗಿದ್ದಲ್ಲಿ, ಮುಂದೆ ಸರ್ಕಾರವು ಏನು ಕ್ರಮ ಕೈಗೊಳ್ಳುವುದು.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ಸುಳ್ಯ ತಾಲ್ಲೂಕಿನ ಶ್ರೀ ಚನ್ನಕೇಶವ ದೇವಾಲಯವು ಧಾರ್ಮಿಕ ದತ್ತಿ ಇಲಾಖೆಗೆ ಒಳಪಟ್ಟಿರುತ್ತದೆ. ಹಾಗೂ ಈ ದೇವಸ್ಥಾನಕ್ಕೆ ೧೯೮೨ನೇ ಇಸವಿಯಲ್ಲಿ ಸಮಿತಿ ರಚಿಸಿದ್ದು ಅದರ ಅವಧಿಯು ದಿನಾಂಕ ೧೬-೩-೧೯೮೬ಕ್ಕೆ ಮುಗಿದಿದೆ.

ಆ) ಧಾರ್ಮಿಕ ದತ್ತಿ ನಿಯಮದಂತೆ ಸದರಿ ದೇವಾಲಯದ ಕಾರ್ಯಕ್ರಮಗಳು ಜರುಗುತ್ತಿವೆ.

ಇ) ಹೌದು. ಸಮಿತಿಯನ್ನು ಪುನರ್ ರಚಿಸಲು ಅಸಿಸ್ಟೆಂಟ್ ಕಮೀಷನರ್, ಪೆಚ್. ಆರ್ ಮತ್ತು ಸಿ.ಇ. ಮಂಗಳೂರು ಅವರಿಗೆ ನಿರ್ದೇಶನ ನೀಡಲಾಗಿದೆ,

ಸಹಕಾರಿ ಮಹಿಳಾ ವೃತ್ತಿ ತರಬೇತಿ ಕೇಂದ್ರ ಸ್ಥಾಪನೆ

೬೬. ಶ್ರೀ ನಂಜಯ್ಯನಮಠ್ (ಗುಳೇದಗುಡ್ಡ).— ಮಾನ್ಯ ಸಮಾಜ ಕಲ್ಯಾಣ ರಾಜ್ಯ ಮಂತ್ರಿಗಳುಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ನಗರದಲ್ಲಿ ಸರ್ಕಾರಿ ಮಹಿಳಾ ವೃತ್ತಿ ತರಬೇತಿ ಕೇಂದ್ರವಿರುವುದೆ ?